20-30 ಕಿಲೋಮೀಟರ್ ದೂರದಲ್ಲಿದೆ. ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಈ ವರ್ಷದಲ್ಲಿಯೇ ಕೋಳಾಲ ಗ್ರಾಮದಲ್ಲಿ ಪೊಲೀಸ್ ಠಾಣೆಯನ್ನು ತೆರೆಯುತ್ತೇವೆಂಬ ಆಶ್ವಾಸನೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಕೋಳಾಲ ಗ್ರಾಮದಲ್ಲಿ 1994-95ರಲ್ಲಿ ಒಂಟು ಔಟ್‌ಪೋಸ್ಟನ್ನು ತೆರೆಯಲಾಗುವುದು.

ಮತೀಯ ಗಲಭೆಯಲ್ಲಿ ಮೃತರಾದ ಕುಟುಂಬದ ಅವಲಂಬಿತರಿಗೆ ಉದ್ಯೋಗ

249 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಮತೀಯ ಗಲಭೆಯಲ್ಲಿ ಮೃತರಾದ ಕುಟುಂಬದ ಅವಲಂಬಿತರಿಗೆ ಉದ್ಯೋಗ ನೀಡಿಕೆಗೆ ಸರ್ಕಾರವು ಬದ್ಧವಾಗಿದೆಯೇ?

ಆ) ಹಾಗಿದ್ದಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಕಳೆದ 4 ವರ್ಷಗಳಿಂದ ಎಷ್ಟು ಜನರಿಗೆ ಉದ್ಯೋಗ ನೀಡಲಾಗಿದೆ (ತಾಲ್ಲೂಕುವಾರು ವಿವರ ನೀಡುವುದು)

ಇ) ಈ ಸಂಬಂಧ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಬಾಕಿ ಇರುವ ಪ್ರಕರಣಗಳೆಷ್ಟು? (ವಿವರಗಳನ್ನು ಒದಗಿಸುವುದು)

ಈ) ಮೃತರಾದವರ ಕುಟುಂಬದವರಿಗೆ ಉದ್ಯೋಗ ನೀಡಿಕೆಗೆ ತಡವಾಗಲು ಕಾರಣವೇನು?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು):

ಅ) ಹೌದು.

ಆ) ಇಲ್ಲ.

ಇ) ಚನ್ನಪಟ್ಟಣ ತಾಲ್ಲೂಕಿನಲ್ಲಿ 8 ಪ್ರಕರಣಗಳು ಬಾಕಿ ಇವೆ. (ವಿವರಗಳು ಅನುಬಂಧದಲ್ಲಿವೆ)

ಈ) ಕರ್ನಾಟಕ ನಾಗರೀಕ ಸೇವಾ ನಿಯಮಗಳು, 1993ನ್ನು ತಿದ್ದುಪಡಿ ಮಾಡಬೇಕಾಗಿದ್ದ ಕಾರಣ ತಡವಾಗಿದೆ. ದಿನಾಂಕ 2-1-94ರಂದು ತಿದ್ದುಪಡಿ ಪ್ರಕಟಣೆ ಹೊರಡಿಸಲಾಗಿದ್ದು ಶೀಘ್ರದಲ್ಲಿ ಈ ಪ್ರಕರಣಗಳನ್ನು ಇತ್ಯರ್ಥಗೊಳಿಸಲಾಗುತ್ತದೆ.

ಅನುಬಂಧ

ಅರ್ಜಿಗಳ ವಿವರಗಳು ಈ ಕೆಳಕಂಡಂತಿವೆ

ಸಂಖ್ಯೆ : ಹೆಚ್‌ಡಿ : 31 ಸಿಆರ್‌ಆರ್ 94

ಕ್ರ.ಸಂ	ಹೆಸರು ಮತ್ತು ವಿಳಾಸ	ಮತೀಯ ಗಲಭೆಯಲ್ಲಿ ಮೃತಪಟ್ಟವರ ಹೆಸರು	ಮೃತಪಟ್ಟ ದಿನಾಂಕ	ಅರ್ಜಿಸಲ್ಲಿಸಿದ ದಿನಾಂಕ
1.	ಶ್ರೀಮತಿ :ಶ್ರೀ ಗಿರಿಜಮ್ಮ ಕೋಂ ಸಿಂಗರೇಗೌಡ ಚನ್ನಪಟ್ಟಣ	ಸಿಂಗರೇಗೌಡ	03-10-90	21-06-1993
2.	ಅಜೀಜ್ ಅಹ್ಮದ್ ಖಾನ್ ಬಿನ್ ಲೇಟ್ ಸನಾವುಲ್ಲಾಖಾನ್ ಚನ್ನಪಟ್ಟಣ	ಸನಾವುಲ್ಲಾಖಾನ್	03-10-90	08-07-1993

3.	ಎಂ.ಎ. ರುಬ್ಬಾನಿ ಬಿನ್ ಲೇಟ್ ಭಕ್ಷಿ ಚನ್ನಪಟ್ಟಣ	ಭಕ್ಷಿ	03-10-90	13-07-1993
4.	ಗೌಸ್ ಬೇಗ್ ಬಿನ್ ಬೇಗ್ ಹುಸೇನ್ ಚನ್ನಪಟ್ಟಣ	ಮುನಿರಾಬೇಗಂ ಮತ್ತು ಅಫಿಜುಲ್ಲಾ ಷರೀಫ್	03-10-90	07-07-1993
5.	ಮಹ್ಮದ್ ಖಲೀಮ್ ಕೇರ್ ಆಫ್‌ಅರಫ್ಖಾನ್ ಚನ್ನಪಟ್ಟಣ	ಮಹ್ಮದ್ ಅಮೀರ್	03-10-90	07-07-1993
6.	ಅಲೀಮ್ ಪಾಷಾ ಬಿನ್ ಮಕ್ಬೂಲ್ ಜಾನ್	ಮಹ್ಮದ್ ಖಾಸಿಂ	15-10-90	06-07-1993
7.	ಅಬ್ದುಲ್ ಅಜೀಜ್ ಕೇರಾಫ್ ಷರೀಫ್ ಕೋಂ ಲೇಟ್ ಸಿಖಿಂದರ್ ಖಾನ್	ಸಿಕಂದರ್ ಖಾನ್	03-10-90	30-06-1993
8.	ನವಾಬುಲ್ಲಾ ಖಾನ್ ಕೇರಾಫ್ ಬುದಾನ್ ಸಾಬ್	ಫೈರುನ್ ಬೀ	03-10-1990	29-06-1993

ಶ್ರೀ ಸಾದತ್ ಅಲಿ ಖಾನ್ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಕರ್ನಾಟಕ ರಾಜ್ಯದಲ್ಲಿ ನವೆಂಬರ್ ಮತ್ತು ಡಿಸೆಂಬರ್ 90ರಲ್ಲಿ 74 ಜನ ಸತ್ತಿದ್ದಾರೆ ಎಂದು ಹೇಳಿದ್ದಾರೆ. ಇದರಲ್ಲಿ ರಾಮನಗರ ಮತ್ತು ಚನ್ನಪಟ್ಟಣಗಳಲ್ಲಿ 27 ಜನ ಸತ್ತಿದ್ದಾರೆ. ಹಿಂದಿನ ಮುಖ್ಯಮಂತ್ರಿಗಳಾದ ಶ್ರೀ ವೀರೇಂದ್ರ ಪಾಟೀಲ್ ರವರು ಅಕ್ಟೋಬರ್‌ನಲ್ಲಿ ಏನು ಹೇಳಿದರು ಅಂದರೆ 3 ತಿಂಗಳಲ್ಲಿ ಸತ್ತಿರತಕ್ಕ ಕುಟುಂಬವರ್ಗದವರ ಪೈಕಿ ಒಬ್ಬರಿಗೆ ಒಂದು ಕೆಲಸ ಕೊಡುತ್ತೇವೆ ಎಂದು. ಆದರೆ ಅದನ್ನು ಕೊಡಲಿಲ್ಲ. ಅನಂತರ ಶ್ರೀ ಬಂಗಾರಪ್ಪನವರು ಮುಖ್ಯಮಂತ್ರಿಗಳಾದರು. ಅವರೂ ಸಹ ಚನ್ನಪಟ್ಟಣದಲ್ಲಿ ಪೀಸ್ ಕಮಿಟಿ ಮೀಟಿಂಗ್ನಲ್ಲಿ ಒಂದು ತಿಂಗಳಿನಲ್ಲಿ ಮೃತಪಟ್ಟ ಕುಟುಂಬವರ್ಗದವರ ಪೈಕಿ ಒಬ್ಬರಿಗೆ ಕೆಲಸ ಕೊಡುವುದಾಗಿ ಹೇಳಿದೇರು; ಅದು ಸಹ ಜಾರಿ ಆಗಲಿಲ್ಲ. ಈಗ 8 ಜನರ ಅರ್ಜಿಗಳ ಪಟ್ಟಿಯನ್ನು ರಾಮನಗರ ಮತ್ತು ಚನ್ನಪಟ್ಟಣಕ್ಕೆ ಸಂಬಂಧಪಟ್ಟಹಾಗೆ ಕೊಟ್ಟಿದ್ದೀರಿ. ಆದರೆ ಅಲ್ಲಿ ಒಟ್ಟು 27 ಜನ ಸತ್ತು ಹೋಗಿದ್ದಾರೆ. ಈ 27 ಜನರ ಕುಟುಂಬವರ್ಗದವರ ಪೈಕಿ ಒಬ್ಬರಿಗೆ ಒಂದು ಕೆಲಸವನ್ನು ಕೊಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುತ್ತದೆಯೇ?

ಶ್ರೀ ಎಂ. ವೀರಪ್ಪ ಮೊಯಿಲಿ : ಈಗಾಗಲೇ ತಡವಾಗಿದೆ. ಅದನ್ನು ನಾನೂ ಒಪ್ಪುತ್ತೇನೆ. ದಿನಾಂಕ 28-01-94ರಂದು ನಾವು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 93 ಅನ್ನು ತಿದ್ದುಪಡಿ ಮಾಡಿ ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಆದುದರಿಂದ ನಾವು ತಕ್ಷಣ ಇದರ ಬಗ್ಗೆ ಕ್ರಮ ಕೈಗೊಂಡು ವಿಲೇವಾರಿ ಮಾಡುತ್ತೇವೆ.

ಶ್ರೀ ಸಾದತ್ ಅಲಿ ಖಾನ್ : ಈಗಾಗಲೇ 3 ವರ್ಷ ಆಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ : 28-01-94ರಂದು ಅಂದರೆ ಕಳೆದ ತಿಂಗಳು ನಾವು ಅಧಿಸೂಚನೆಯನ್ನು ಹೊರಡಿಸಿದ್ದೇವೆ. ಈಗ ನಿಯಮಗಳು ಯಾವುದೂ ಬಾಧಕ ಬರುವುದಿಲ್ಲ. ಒಂದು ತಿಂಗಳಲ್ಲಿ ಅಥವಾ ಅದರೊಳಗೆ ಇದನ್ನು ತೀರ್ಮಾನ ಮಾಡುತ್ತೇನೆ.

ಶಿಥಿಲಗೊಂಡಿರುವ ಕಟ್ಟಡಗಳ ದುರಸ್ತಿ

325 - ಶ್ರೀ ಪಿ. ಬಸವರಾಜ್ (ಬ್ರಹ್ಮವರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?